### ಶೇಡಬಾಳ ರಾಷ್ಟ್ರಸಂತ ವಿದ್ಯಾನಂದ ಮುನಿಮಹಾರಾಜರ ಜನ್ಮಶತಾಬ್ದಿ ಸಮಾರಂಭ

## "ಮುನಿಧರ್ಮಕ್ಕೆ ಆಧಾರಸ್ತಂಭವಾಗಿದ್ದ ವಿದ್ಯಾನಂದ ಶ್ರೀಗಳು"

-ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಕಾಗವಾಡ : ವಿಶ್ವಧರ್ಮ ಪ್ರತಿಪಾದನೆಯಿಂದ ಜಗತ್ತಿನ ಉದ್ದಗಲಕ್ಕೂ ಕೀರ್ತಿ ಬೆಳಗಿ ಗೌರವ ಪಡೆದ ಅಪರೂಪದ ರಾಷ್ಟ್ರಸಂತ ಶ್ರೀ ವಿದ್ಯಾನಂದ ಮುನಿಮಹಾರಾಜರು ಉತ್ತರ ಕರ್ನಾಟಕದ, ಅದರಲ್ಲೂ ಶೇಡಬಾಳದವರಾಗಿರುವುದು ಹೆಮ್ಮೆಯ ಸಂಗತಿ** ಎಂದು ಹೊಂಬುಜ ಜೈನ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಹೇಳಿದರು.

ಶೇಡಬಾಳ ಪಟ್ಟಣದ ವಿದ್ಯಾನಂದ ಮುನಿಮಹಾರಾಜ ಕನ್ನಡ ಶಾಲೆ ಆವರಣದಲ್ಲಿ ಜ. 12 ರಂದು ಪ್ರಥಮಾಚಾರ್ಯ ಶಾಂತಿಸಾಗರ ಮಹಾರಾಜರ ಆಚಾರ್ಯ ಪದವಿ ಶತಮಾನೋತ್ಸವ, ರಾಷ್ಟ್ರಸಂತ ವಿದ್ಯಾನಂದ ಮುನಿಮಹಾರಾಜರ ಜನ್ಮ ಶತಾಬ್ದಿ ವರ್ಷ ಹಾಗೂ ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿಯವರ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.

**ಮುನಿಧರ್ಮಕ್ಕೆ ಸಮಸ್ಯೆ ಬಂದಲ್ಲಿ ವಿದ್ಯಾನಂದ ಮುನಿಮಹಾರಾಜರು ತಿಳಿಗೊಳಿಸುವ ಆಧಾರ ಸ್ತಂಭವಾಗಿದ್ದರು. ಜೈನ ಧರ್ಮದ ಪಂಚರಂಗಿ ಧ್ವಜ ಹಾಗೂ ಸಮಾಜದ ಲಾಂಛನ ನೀಡಿದ ಕೊಡುಗೆ ಶ್ರೀಗಳಿಗೆ ಸಲ್ಲುತ್ತದೆ ಎಂದರು.**

ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, **ವಿದ್ಯಾನಂದ ಮುನಿಮಹಾರಾಜರು ಜೈನ ಸಮಾಜಕ್ಕೆ ಸೀಮಿತವಾಗದೇ, ಇಡೀ ವಿಶ್ವಕ್ಕೆ ಅಹಿಂಸಾ ತತ್ವಗಳನ್ನು ಸಾರಿ ಹೇಳಿದರು. ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿಗಳು ಹಾಗೂ ವಿದ್ಯಾನಂದ ಮುನಿ ಮಹಾರಾಜರು 21ನೇ ಶತಮಾನದ ಮಹಾನ್ ಸಂತರಾಗಿದ್ದು, ಅವರ ಕಾಲಾವಧಿಯಲ್ಲಿ ನಾವೆಲ್ಲ ಬಾಳಿ ಬದುಕಿದ್ದರಿಂದ ಪುಣ್ಯವಂತರಾಗಿದ್ದೇವೆ** ಎಂದರು.

ಹಂಚಿನಾಳ ಮಠದ ಮಹೇಶಾನಂದ ಸ್ವಾಮೀಜಿ ಮಾತನಾಡಿ, **ವಿದ್ಯಾನಂದ ಮುನಿಮಹಾರಾಜರು ಸಮಾಜಕ್ಕೆ ನೀಡಿದ ಕೊಡುಗೆ ಅಪಾರ. ಜೈನ ಮತ್ತು ಜೈನೇತರ ಸಮಾಜದ ತಂದೆ-ತಾಯಿ ತಮ್ಮ ಮಕ್ಕಳಿಗೆ ಮುನಿಗಳ ಆದರ್ಶ ತಿಳಿಹೇಳಬೇಕು** ಎಂದು ಸಲಹೆ ನೀಡಿದರು.

ಸೋಂದಾ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಜಗದ್ಗುರು ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿ ಹಾಗೂ ಕೊಲ್ಹಾಪುರ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಸ್ವಾಮೀಜಿಯವರು ಮಾತನಾಡಿದರು.

ವಿದ್ಯಾನಂದ ಮುನಿಮಹಾರಾಜರ ಕೀರ್ತಿ ಸ್ತಂಭಕ್ಕೆ ಪೂಜೆ ಸಲ್ಲಿಸಿ, ಲೋಕಾರ್ಪಣೆ ಮಾಡಿದ ಶ್ರೀಗಳು, ಮುನಿಮಹಾರಾಜರ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿದರು. ಪ್ರತಿಷ್ಠಾಚಾರ್ಯರಾದ ಕುಮಾರ ಅಲಗೌಡರ ಹಾಗೂ ಇತರ ಉಪಾಧ್ಯೆಯವರಿಂದ ಭಟ್ಟಾರಕ ಸ್ವಾಮೀಜಿಯವರ ಪಾದಪೂಜೆ ನೆರವೇರಿತು. ಮುನಿಮಹಾರಾಜರ ಪೂರ್ವಾಶ್ರಮದ್ ಮನೆಯನ್ನು ಮುಂಬರುವ ದಿನಗಳಲ್ಲಿ ಸ್ಮಾರಕವಾಗಿ ನಿರ್ಮಿಸುವುದಾಗಿ ಹೊಸದಿಲ್ಲಿಯ ಕುಂದ ಕುಂದ ಭಾರತಿ ಟ್ರಸ್ಟ್‌ನವರು ಘೋಷಿಸಿದರು. ಪಂ. ಬಾಹುಬಲಿ ಬೊಸಗೆ, ಪಂ. ರವೀಂದ್ರ ನರಸಾಯಿ ಹಿರಿಯರಾದ ಬಾಲ ಬ್ರಹ್ಮಚಾರಿಣಿ ಪದ್ಮಾವತಿ ಖೇಮಲಾಪುರೆ, ಪಾಠಶಾಲೆಯ ಗುರುಮಾತೆಯರನ್ನು ಸತ್ಕರಿಸಿದರು. ಕಾರ್ಯಕ್ರಮದ ಸಂಯೋಜಕ ಪ್ರಕಾಶ ನಾಂದ್ರೆ ಅವರನ್ನು ಸತ್ಕರಿಸಲಾಯಿತು. ವಿದ್ಯಾರ್ಥಿನಿಯರಾದ ಸೃಷ್ಟಿ ಕುರಳೆ ಹಾಗೂ ತನುಶ್ರೀ ಲಾಟಕರ ಮುನಿಮಹಾರಾಜರ ಪರಿಚಯ ನೀಡಿದರು. ಡಾ. ರಾಜೇಂದ್ರ ಸಾಂಗಾವೆ ಸ್ವಾಗತಿಸಿದರು. ಶೀತಲ ಮಾಲಗಾಂವೆ ನಿರೂಪಿಸಿ ವಂದಿಸಿದರು. ಕುಂದ ಕುಂದ ಭಾರತಿ ಟ್ರಸ್ಟ್ ಅಧ್ಯಕ್ಷ ಸತೀಶ ಜೈನ್, ಟ್ರಸ್ಟಿ ಅನಿಲ ಜೈನ್, ಅನಿವಾಸಿ ಭಾರತೀಯ ಅನಿಲ ಜೈನ್, ಕೇಂದ್ರ ಅಲ್ಪಸಂಖ್ಯಾತ ಆಯೋಗದ ಸದಸ್ಯ ಧನ್ಯಕುಮಾರ ಗುಂಡೆ ಹಾಗೂ ಶ್ರಾವಕ-ಶ್ರಾವಕಿಯರು ಪಾಲ್ಗೊಂಡಿದ್ದರು.

## ಭೀಮರಾವ್ ಬಾಲಾಜಿ ಅಂಗಡಿ ಚಾರಿಟೇಬಲ್ ಟ್ರಸ್ಟ್ (ರಿ.)

ಈ ಮೂಲಕ 1985ನೇ ಇಸವಿಯಿಂದ ಬಡ-ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮುಂದುವರಿಸಲು ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಈ ಪ್ರೋತ್ಸಾಹ ವಿದ್ಯಾರ್ಥಿ ನಿಧಿಯನ್ನು ಬಳಸಿ, ವಿದ್ಯಾಭ್ಯಾಸದಲ್ಲಿ ಉತ್ತೀರ್ಣರಾಗಿರುವುದು ಸಂತೋಷದ ಸಂಗತಿಯಾಗಿದೆ. ಸದರಿ ವಿದ್ಯಾರ್ಥಿ ವೇತನದಿಂದ ವಿದ್ಯಾಭ್ಯಾಸ ಪೂರೈಸಿ, ಖಾಸಗಿ ಅಥವಾ ಸರಕಾರಿ, ಉನ್ನತ ಹುದ್ದೆ ಮತ್ತು ಸ್ವಉದ್ಯೋಗ ಮಾಡುತ್ತಿದ್ದು, ಯಶಸ್ಸು ಪಡೆದಿರುತ್ತಾರೆ. ವಿದ್ಯಾರ್ಥಿ ವೇತನದ ಫಲಾನುಭವಿಗಳು ತಮ್ಮ ಸ್ವಇಚ್ಛೆಯಿಂದ ಈ ಭೀಮರಾವ್ ಬಾಲಾಜಿ ಅಂಗಡಿ ಚಾರಿಟೇಬಲ್ ಟ್ರಸ್ಟಿಗೆ ಹಣದಾನ ಮಾಡುವುದರಿಂದ ಇನ್ನಷ್ಟು ಹೆಚ್ಚಿನ ಬಡ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ಸಹಾಯವಾಗುತ್ತದೆ ಎಂದು ವಿನಂತಿಸಲಾಗಿದೆ.

**ವಿದ್ಯಾದಾನಕ್ಕಾಗಿ ಹಣ ಸಂದಾಯ ಮಾಡುವವರು : ಶ್ರೀ ಡಿ.ಆರ್. ಅಂಗಡಿ ಮೊ: 99167 01008 ಕ್ಕೆ ಸಂಪರ್ಕಿಸಲು ಕೋರಿದೆ.**

### ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವ-ವಿಶ್ವಶಾಂತಿ ಮಹಾಯಾಗ

## "ದುಶ್ಚಟ ಬಿಟ್ಟು ಆಚಾರವಂತರಾಗಿ ಬಾಳಿರಿ"

-ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹಮ್ಮಿಗೆ : ಪ್ರತಿಯೊಬ್ಬರೂ ಧರ್ಮದಿಂದ ನಡೆಯಬೇಕು. ಜೈನ ಧರ್ಮದ ಆಚಾರ ಪಾಲನೆ ಮಾಡುವುದರ ಜತೆಗೆ ಬೇರೆಯವರಿಗೆ ಆದರ್ಶವಾಗಬೇಕು. ದುಶ್ಚಟಗಳಿಂದ ದೂರವಾಗಿ ಆಚಾರವಂತರಾಗಿ ಬಾಳಬೇಕು** ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಹೇಳಿದರು.

ಮುಂಡರಗಿ ತಾಲ್ಲೂಕಿನ ಹಮ್ಮಿಗೆ ಗ್ರಾಮದ ಶ್ರೀ ಚಂದ್ರಪ್ರಭ ತೀರ್ಥಂಕರ ಬಸದಿಯಲ್ಲಿ ಪಂಚಕಲ್ಯಾಣ ಪ್ರತಿಷ್ಠಾ ಮಹಾಮಹೋತ್ಸವ ಹಾಗೂ ವಿಶ್ವಶಾಂತಿ ಮಹಾಯಾಗ ಕಾರ್ಯಕ್ರಮದ ಪ್ರಯುಕ್ತ ಇತ್ತೀಚೆಗೆ ಜರುಗಿದ ನಿರ್ವಾಣ ಕಲ್ಯಾಣ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

### "ಹುಟ್ಟಿನಿಂದ ಜೈನರಾಗುವುದರ ಬದಲಾಗಿ ಆಚರಣೆಯಲ್ಲಿ ಜೈನರಾಗಿ"

ಶ್ರೀ ವಿಮಲೇಶ್ವರ ಮುನಿಮಹಾರಾಜರು ಮಾತನಾಡಿ **ಸತ್ಯ, ಅಹಿಂಸೆ, ತ್ಯಾಗ, ಪ್ರಾಮಾಣಿಕತೆಯಿಂದ ಬಾಳಿದರೆ ಮಾತ್ರ ಸಮಾಜದ ತತ್ವ ಆಚಾರಿಯಾಗುತ್ತಾರೆ. ಹುಟ್ಟಿನಿಂದ ಜೈನರಾಗುವುದರ ಬದಲಾಗಿ ಆಚರಣೆಯಲ್ಲಿ ಜೈನರಾಗಬೇಕು** ಎಂದರು.

ಸೋಂದಾ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಜಗದ್ಗುರು ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿ ಮಾತನಾಡಿ, **ಪಂಚಕಲ್ಯಾಣ ಎಂದರೆ ಗರ್ಭಾವಂತರ್ಣ, ಜನ್ಮಾಭಿಷೇಕ, ಭೋಗದಿಂದ ತಪದ ಕಡೆಗೆ, ಕೇವಲ ಜ್ಞಾನ ಕಲ್ಯಾಣ, ನಿರ್ವಾಣ ಕಲ್ಯಾಣ ಎನ್ನುವ ಪಂಚಕಲ್ಯಾಣದ ಕುರಿತು** ವಿವರಿಸಿದರು. ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವ ನಿಮಿತ್ತ ಕಾರ್ಯಕ್ರಮಗಳು ನಡೆದವು.

ಶಾಸಕ ಡಾ. ಚಂದ್ರು ಲಮಾಣಿ, ಜಿ.ಪಂ. ಮಾಜಿ ಸದಸ್ಯ ಹೇಮಗಿರೀಶ ಹಾವಿನಾಳ, ಚಂದ್ರಪ್ರಭ ತೀರ್ಥಂಕರ ಪಂಚಕಲ್ಯಾಣ ಮಹಾಮಹೋತ್ಸವ ಹಾಗೂ ವಿಶ್ವಶಾಂತಿ ಮಹಾಯಾಗ ಕಮಿಟಿ ಅಧ್ಯಕ್ಷ ಬಿ.ಬಿ. ಗುಂಜಾಳ, ಶಾಂತರಾಜ ಮೆಣಸಿನಕಾಯಿ ಇನ್ನಿತರರು ಉಪಸ್ಥಿತರಿದ್ದರು.

### ಸುವರ್ಣ ಮಹೋತ್ಸವ ಆಚರಣೆ

## "ಲಕ್ಷ್ಮೀಸೇನ ಶಿಕ್ಷಣ ಸಂಸ್ಥೆ ಪಾತ್ರ ಹಿರಿದು"




**ರಾಯಬಾಗ : ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಮೂಲಕ 50 ವರ್ಷ ಪೂರೈಸಿದ ಲಕ್ಷ್ಮೀಸೇನ ಶಿಕ್ಷಣ ಸಂಸ್ಥೆ ಕಾರ್ಯ ಶ್ಲಾಘನೀಯ** ಎಂದು ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷ ಡಾ. ಪ್ರಭಾಕರ ಕೋರೆ ಹೇಳಿದರು.

ಪಟ್ಟಣದ ಮಹಾವೀರ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶ್ರೀ ಲಕ್ಷ್ಮೀಸೇನ ಶಿಕ್ಷಣ ಸಂಸ್ಥೆಯ ಸುವರ್ಣ ಮಹೋತ್ಸವದಲ್ಲಿ ಮಾತನಾಡಿ, ಸುತ್ತಮುತ್ತಲಿನ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಲಕ್ಷ್ಮೀಸೇನ ಸಂಸ್ಥೆ ಪ್ರಮುಖ ಪಾತ್ರ ವಹಿಸಿದ್ದು, ಲಕ್ಷಾಂತರ ವಿದ್ಯಾರ್ಥಿಗಳ ಬದುಕಿಗೆ ಮಾರ್ಗ ತೋರಿದೆ ಎಂದರು.

ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಕೊಲ್ಲಾಪುರ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಹಾಸ್ವಾಮೀಜಿ, ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಕವಲಗುಡ್ಡದ ಅಮರೇಶ್ವರ ಸ್ವಾಮೀಜಿ ಸಾನಿಧ್ಯ ನೀಡಿ ಆಶೀರ್ವದಿಸಿದರು.

ಸಂಸ್ಥೆ ಅಧ್ಯಕ್ಷ ದಶರಥ ಶೆಟ್ಟಿ, ಉಪಾಧ್ಯಕ್ಷ ಸತ್ಯಕುಮಾರ ಬಿರಾಜ, ಕಾರ್ಯದರ್ಶಿ ಶೀತಲ ಬೇಡಕಿಹಾಳೆ, ಸಹಕಾರ್ಯದರ್ಶಿ ಸಂಜು ಬಡೋರೆ, ನಿರ್ದೇಶಕರಾದ ಶಾಂತಿನಾಥ ಶೆಟ್ಟಿ, ಡಿ.ಸಿ. ಸದಲಗಿ, ಡಾ. ಅಜಿತ ನಾಯಕ್ ಅವರನ್ನು ಡಾ. ಪ್ರಭಾಕರ ಕೋರೆ ಸನ್ಮಾನಿಸಿದರು.

ಶಾಸಕ ಡಿ.ಎಂ. ಐಹೊಳೆ, ಲೇಖಕ ಡಾ. ಸರ್ಫ್ರಾಜ್ ಚಂದ್ರಗುತ್ತಿ, ಐನಾಪುರದ ಸಿದ್ಧೇಶ್ವರ ಸ್ವಾಮೀಜಿ, ಬಿ.ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ಅಪ್ಪಾಸಾಹೇಬ ಕುಲಗುಡೆ, ಮಾಜಿ ಶಾಸಕರಾದ ಸಂಜಯ ಪಾಟೀಲ, ಕಲ್ಲಪ್ಪಣ್ಣ ಮಗೆಣ್ಣವರ, ವಿನೋದ ದೊಡ್ಡಣ್ಣವರ, ಮಹಾವೀರ ನಿಲಜಗಿ ಇನ್ನಿತರರು ಇದ್ದರು.

WWW.HOMBUJAPADMAVATI.ORG

# ಕುಂದಾದ್ರಿ ಜಾತ್ರಾ ಮಹೋತ್ಸವ ವೈಭವ-ಲಕ್ಷ ದೀಪೋತ್ಸವ ಭವ್ಯತೆ









WWW.HOMBUJAPADMAVATI.ORG

## ಸವಾಲು ಕಾರ್ಯಕ್ರಮ



**ಹುಬ್ಬಳ್ಳಿ :** ಇಲ್ಲಿಯ ಭಗವಾನ ಶ್ರೀ 1008 ಮಹಾವೀರ ತೀರ್ಥಂಕರರ ನೂತನ ಜಿನಮಂದಿರದಲ್ಲಿ ಪ್ರತಿಷ್ಠಾಪನೆ ಹಾಗೂ ಸಮವಸರಣ ಮಂದಿರ ಮತ್ತು ಮಾನಸ್ತಂಭೋಪರಿ ಚತುರ್ಮುಖ ಜಿನಬಿಂಬಗಳ ಪ್ರತಿಷ್ಠಾಪನೆ ಪಂಚಕಲ್ಯಾಣ ಮಹೋತ್ಸವ ನಿಮಿತ್ತ ವಿವಿಧ ಪದವಿಗಳ ಹಂಚಿಕೆಯ ಸವಾಲು ಕಾರ್ಯಕ್ರಮವು ದಿನಾಂಕ 11-01-2025ರ ಶನಿವಾರದಂದು ಅಭೀಕ್ಷ್ಣಜ್ಞಾನಭಾಸ್ಕರ ಮುನಿಶ್ರೀ 108 ಪುಣ್ಯಸಾಗರ ಮಹಾರಾಜರ ಪಾವನ ಸಾನಿಧ್ಯದಲ್ಲಿ ಹಾಗೂ ಹೊಂಬುಜದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು ಹಾಗೂ ಸೋಂದಾ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಜಗದ್ಗುರು ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿಯವರ ನೇತೃತ್ವದಲ್ಲಿ ನೆರವೇರಿತು.

"ನೂತನ ಬಸದಿಯ ಸಮವಸರಣ ಮಂದಿರ ಮತ್ತು ಮಾನಸ್ತಂಭೋಪರಿ ಚತುರ್ಮುಖ ಜಿನಬಿಂಬಗಳ ಪ್ರತಿಷ್ಠಾಪನೆ" ನಿಮಿತ್ತ "ಪಂಚಕಲ್ಯಾಣ ಮಹೋತ್ಸವ"ವನ್ನು **ಮೇ 11 ರಿಂದ 15ರ ವರೆಗೆ** ಅಭೀಕ್ಷ್ಣಜ್ಞಾನಭಾಸ್ಕರ ಮುನಿಶ್ರೀ 108 ಪುಣ್ಯಸಾಗರ ಮಹಾರಾಜರ ಪಾವನ ಸಾನಿಧ್ಯದಲ್ಲಿ ಹಾಗೂ ಹೊಂಬುಜದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರ ನೇತೃತ್ವ ಹಾಗೂ ಸಕಲ ಭಟ್ಟಾರಕ ಮಹಾಸ್ವಾಮೀಜಿಯವರ ನೇತೃತ್ವದಲ್ಲಿ ನೆರವೇರಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕ : ಮೊ: 98456 16187, 9448350680



## ಕರ್ನಾಟಕ ಜೈನ ಅಸೋಸಿಯೇಷನ್ನಿನ 2024-2029 ಅವಧಿಯ ಚುನಾವಣೆಯ ಫಲಿತಾಂಶ ಪ್ರಕಟ

**ಬೆಂಗಳೂರು :** ಈ ಹಿಂದೆ 1999 ರಿಂದ 2019ರವರೆಗೆ 20 ವರ್ಷಗಳ ಕಾಲ ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದ 'ಸಮಾಜರತ್ನ' ಶ್ರೀ ಎಸ್. ಜಿತೇಂದ್ರ ಕುಮಾರ್ ಅವರು ಇತ್ತೀಚೆಗೆ 2024-2029ರ ಐದು ವರ್ಷಗಳ ಅವಧಿಗೆ ನಡೆದ ಚುನಾವಣೆಯಲ್ಲಿ ಬಹುಮತಗಳಿಂದ ಅಧ್ಯಕ್ಷರಾಗಿ ಪುನಹ ಆಯ್ಕೆಯಾಗಿರುತ್ತಾರೆ.

ಶ್ರೀ ರಾಜಕೀರ್ತಿಯವರು ಮತ್ತು ಶ್ರೀ ಕಲಗೌಡ (ಶೀತಲ) ಭುಜಗೌಡ ಪಾಟೀಲ್, ಅವರುಗಳು ಉಪಾಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಶ್ರೀಮತಿ ಆಶಾಪ್ರಭುರವರು, ಸಹಕಾರ್ಯದರ್ಶಿಗಳಾಗಿ ಡಾ॥ ನೀರಜಾ ನಾಗೇಂದ್ರ ಕುಮಾರ್ ಮತ್ತು ಶ್ರೀ ವಿ. ಪ್ರಶಾಂತ್ ಅವರುಗಳು ಆಯ್ಕೆಯಾಗಿರುತ್ತಾರೆ. ಕೋಶಾಧಿಕಾರಿಯಾಗಿ ಶ್ರೀ ಮಹಾವೀರ ಜೈನ್ ಅವರು ಆಯ್ಕೆಯಾಗಿರುತ್ತಾರೆ. ಸಹಕೋಶಾಧಿಕಾರಿಯಾಗಿ ಶ್ರೀ ಎ.ಸಿ. ಧರಣೇಂದ್ರಯ್ಯನವರು ಆಯ್ಕೆಯಾಗಿರುತ್ತಾರೆ. ಇದರ ಜೊತೆಗೆ ಬೆಂಗಳೂರು ಸೇರಿದಂತೆ ಒಟ್ಟು ರಾಜ್ಯಾದ್ಯಾಂತ 26 ವಿಭಾಗಗಳಿಂದ 38 ಜನರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿರುತ್ತಾರೆ.


# ಗುರುದೇವ

GURUDEVA MONTHLY

RNI No. 13248/57-POSTEL REGD No. KA/SK/SMG 198/2024-26

Date of Posting 17th of every month. Sub Post office, Humcha - 577436

ವಾರ್ಷಿಕ ಚಂದಾ : ರೂಪಾಯಿ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000-00 ಮಾತ್ರ.

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬



Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722